ಈ) ಈಗಲಾದರೂ ಇವರಿಗೆ ಖಾತೆ ಪಹಣಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು) :

ಅ) ಹೌದು : ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ ಕೊಟಗಾರ್ಲಹಳ್ಳಿ ಗ್ರಾಮದ ರಿ.ಸ.ನಂ. 264ರಲ್ಲಿ 3 ಜನರಿಗೆ ತಲಾ 4-00 ಎಕರೆಯಂತೆ ಜಮೀನು ಮಂಜೂರಾತಿ ನೀಡಿರುವುದು ನಿಜವಾಗಿರುತ್ತದೆ.

ಆ) ಈ ಕೆಳಕಂಡ 3 ಜನರಿಗೆ ಮಂಜೂರಾತಿ ನೀಡಿದೆ :-

1)	ಶ್ರೀ ಹನುಮಂತಪ್ಪ ಬಿನ್ ಟಿ. ನಾಗಪ್ಪ	4.00 ಎಕರೆಗಳು
2)	ಶ್ರೀ ಮುದ್ದಪ್ಪ ಬಿನ್ ದೊಡ್ಡಹನುಮಂತಪ್ಪ	4.00 ಎಕರೆಗಳು
3)	ಶ್ರೀ ಹನುಮಂತಪ್ಪ ಬಿನ್ ನಾಗಪ್ಪ	4.00 ಎಕರೆಗಳು

ಹೌದು; ಮಂಜೂರಿದಾರರು ಖಾತೆ ಮತ್ತು ಪಹಣಿಗಳಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಇ) ಮಂಜೂರಿದಾರರಿಗೆ ಖಾತೆ ಮತ್ತು ಪಹಣಿಗಳನ್ನು ನೀಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಈ) ಈಗಾಗಲೇ ಕ್ರಮ ಕೈಗೊಂಡಿರುವುದರಿಂದ ಇದು ಉದ್ಭವಿಸುವುದಿಲ್ಲ.

ಆರಾಧನಾ ಯೋಜನೆಯಡಿಯಲ್ಲಿ ಶಿವಮೊಗ್ಗ ಜಿಲ್ಲೆಗೆ ಖರ್ಚು ಮಾಡಿದ ಹಣ

991 (1683) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

1. "ಆರಾಧನಾ" ಯೋಜನೆಗೆ ಶಿವಮೊಗ್ಗ ಜಿಲ್ಲೆಗೆ ಇದುವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು?
2. ಈ ಹಣ ಜಿಲ್ಲೆಯಲ್ಲಿ ಈಗ ಉಪಯೋಗವಾಗಿದೆಯೆ? (ತಾಲ್ಲೂಕುವಾರು ವಿವರ ನೀಡುವುದು)
3. 1992-93ಕ್ಕೆ ಶಿವಮೊಗ್ಗ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ರಾಜಾ ಅಮರೇಶ ನಾಯಕ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

1. ರೂ. 22,74,850-00
2. ಹೌದು.

ತಾಲ್ಲೂಕುವಾರು ಹಣವನ್ನು ಬಿಡುಗಡೆ ಮಾಡಿದ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ತಾಲ್ಲೂಕು	ಅರ್ಜಿಗಳ ಸಂಖ್ಯೆ	ಹಂಚಿಕೆ ಮಾಡಿದ ಮೊತ್ತ	
1.	ಸೊರಬ	52	ರೂ. 1,82,000-00	89,265-00
2.	ಶಿವಮೊಗ್ಗ	16	ರೂ. 1,50,000-00	89,265-00
3.	ಭದ್ರಾವತಿ	9	ರೂ. 1,50,000-00	89,265-00
4.	ಹೊನ್ನಾಳಿ	7	ರೂ. 1,50,000-00	89,265-00
5.	ತೀರ್ಥಹಳ್ಳಿ	50	ರೂ. 1,50,000-00	89,265-00
6.	ಚಿನ್ನಗಿರಿ	8	ರೂ. 1,50,000-00	89,265-00
7.	ಸಾಗರ	1	ರೂ. 1,50,000-00	89,265-00
8.	ಶಿಕಾರಿಪುರ	33	ರೂ. 1,50,000-00	89,265-00
9.	ಹೊಸನಗರ	2	ರೂ. 1,50,000-00	89,265-00
		178	ಒಟ್ಟು ರೂ. 22,74,850-00	

3. ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಅಳವಡಿಸಿದ ಜಮೀನಿನ ವಿಸ್ತೀರ್ಣ

993* (1426) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1985 ರಿಂದ 1992ರ ವರೆಗೆ ಸಾಮಾಜಿಕ ಅರಣ್ಯದಡಿಯಲ್ಲಿ ಬರುವ ಒಟ್ಟು ಕ್ಷೇತ್ರ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಇದಕ್ಕಾಗಿ ತಗುಲಿದ ವೆಚ್ಚವೆಷ್ಟು?

ಇ) ಈ ಸಾಮಾಜಿಕ ಅರಣ್ಯ ಯೋಜನೆಯನ್ನು ಜಾರಿಗೊಳಿಸಲು ಬೇಕಾಗಿರುವ ಹಣದ ಮೂಲ ಯಾವುದು?

ಶ್ರೀ ಈ.ಟಿ. ಶಂಭುನಾಥ್ (ರಾಜ್ಯ ಅರಣ್ಯ ಸಚಿವರು) :

ಅ) 31,765 ಹೆಕ್ಟೇರ್ (ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ)

ಆ) ರೂ. 1189.36 ಲಕ್ಷಗಳು

ಇ) ವಿಶ್ವಬ್ಯಾಂಕ್ ಹಾಗೂ ಯುನೈಟೆಡ್ ಕಿಂಗ್‌ಡಂನ ಓ.ಡಿ.ಎ.